ಪರಿಸ್ಥಿತಿ ಇದೆ. ಆದ್ದರಿಂದ ಇದರ ಬಗ್ಗೆ ತಕ್ಷಣ ಕ್ರಮ ಜರುಗಿಸುತ್ತೀರಾ ಎಂದು ಮಾನ್ಯ ಕಂದಾಯ ಸಚಿವರನ್ನು ಕೇಳುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಎನ್. ಚಲುವರಾಯಸ್ವಾಮಿ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು): ಮಾನ್ಯ ಉಪಾಧ್ಯಕ್ಷರೆ, ಬಹುಶಃ ನಾನು ಆ ಪ್ರಾಂತ್ಯದ ಶಾಸಕನಾಗಿ ಮಂತ್ರಿಯಾಗಿರುವುದರಿಂದ ಇದರ ಬಗ್ಗೆ ಉತ್ತರ ಕೊಡಿ ಎಂದು ಮಾನ್ಯ ಕಂದಾಯ ಸಚಿವರು ನನಗೆ ಹೇಳಿದ್ದಾರೆ. ಈ ಇಲಾಖೆಗೆ ಸಂಬಂಧಪಟ್ಟಂಥ ಮಾನ್ಯ ಮಂತ್ರಿಗಳು ಸದನದಲ್ಲಿ ಇಲ್ಲದೇ ಇರುವುದರಿಂದ ಈ ವಿಚಾರವನ್ನು ಇಲಾಖೆಯ ಮಂತ್ರಿಯವರ ಗಮನಕ್ಕೆ ತರುತ್ತೇವೆ. ಮತ್ತೆ ಹಿರಿಯ ಸದಸ್ಯರಾದ ಮಾನ್ಯ ಮಾಧುಸ್ವಾಮಿಯವರು ಹೇಳಿರತಕ್ಕಂಥದ್ದು ಬಹುಶಃ ಸತ್ಯ ವಿಚಾರವಾಗಿದೆ. ಹಿಂದೆ ನಾನು ಎರಡುಮೂರು ಬಾರಿ ವಿರೋಧ ಪಕ್ಷದ ಶಾಸಕನಾಗಿದ್ದೆ. ಸರ್ಕಾರವನ್ನು ಆ ಸಂದರ್ಭದಲ್ಲಿ ಬೇರೆಯವರು ನಡೆಸುತ್ತಿದ್ದರು. ಆ ಸಂದರ್ಭದಲ್ಲಿ ಅವರು ಮಾಡತಕ್ಕಂಥ ಕಾಮಗಾರಿಯಲ್ಲಿ ಸಾಕಷ್ಟು ವ್ಯತ್ಯಾಸವಾಗಿದೆ ಎನ್ನುವುದು ನನ್ನ ಗಮನಕ್ಕೆ ಬಂದಿದೆ. ಅವರ ಬಗ್ಗೆ ತಕ್ಷಣ ಕ್ರಮ ತೆಗೆದುಕೊಳ್ಳುವುದಕ್ಕೆ ಆ ಇಲಾಖೆಯ ಮಾನ್ಯ ಸಚಿವರ ಗಮನಕ್ಕೆ ತಂದು ತಕ್ಷಣ ಕ್ರಮ ಜರುಗಿಸುತ್ತೇವೆ. ತಾತ್ಕಾಲಿಕವಾಗಿ ಏನು ಮಾಡಬೇಕೋ ಅದನ್ನು ಮಾಡಿ ನೀರು ಬಿಡಿಸುವುದಕ್ಕೆ ಕ್ರಮ ತೆಗೆದುಕೊಳ್ಳುತ್ತೇವೆ. ಆ ಎಂಜಿನಿಯರ್ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಕೂಡ ಸಚಿವರಿಗೆ ತಿಳಿಸುತ್ತೇನೆ.

ಆ) ಆಂಬ್ಯುಲೆನ್ಸ್ ಖರೀದಿಗೆ ಮ್ಯಾಚಿಂಗ್ ಗ್ರಾಂಟ್‌ನ್ನು ಸರ್ಕಾರದಿಂದ ಕೊಡಿಸುವ ಬಗ್ಗೆ.

ಶ್ರೀ ಎ.ಎಸ್. ಬಸವರಾಜು (ಅರಸೀಕೆರೆ): ಮಾನ್ಯ ಉಪಾಧ್ಯಕ್ಷರೆ, ಅರಸೀಕೆರೆಯಲ್ಲಿ ಜೆ.ಸಿ. ಆಸ್ಪತ್ರೆ ಇದೆ.

ಉಪಾಧ್ಯಕ್ಷರು: ಆಸ್ಪತ್ರೆಯ ವಿಷಯ ಮುಗಿದು ಹೋಯಿತು.

ಶ್ರೀ ಎ.ಎಸ್. ಬಸವರಾಜು: ಆ ರಾಷ್ಟ್ರೀಯ ಹೆದ್ದಾರಿಯಲ್ಲಿ ಅನೇಕ ಸಲ ಆ್ಯಕ್ಸಿಡೆಂಟ್‌ಗಳು ಆಗುತ್ತವೆ. ತಕ್ಷಣ ಆ ರೋಗಿಗಳನ್ನು ಬೆಂಗಳೂರಿನ ಆಸ್ಪತ್ರೆಗಳಿಗೆ ಕಳುಹಿಸಬೇಕಾದರೆ ನಮ್ಮಲ್ಲಿ ಆಂಬ್ಯುಲೆನ್ಸ್ ಇಲ್ಲ. ಆಂಬ್ಯುಲೆನ್ಸ್ ಬೇಕಾಗಿರುವುದರಿಂದ ರೋಟರಿಯವರು ಕೂಡ ಅರ್ಧ ಭಾಗವನ್ನು ತಾವು ಕೊಡುವುದಕ್ಕೆ ರೆಡಿಯಾಗಿದ್ದೇವೆಂದು ಮುಂದೆ ಬಂದಿದ್ದಾರೆ. ಅನೇಕ ರೋಟರಿಯವರು ಆರೋಗ್ಯ ಇಲಾಖೆಗೆ ಸಾಕಷ್ಟು ಸಹಕಾರವನ್ನು ಕೊಟ್ಟಿದ್ದಾರೆ. ಅದಕ್ಕೋಸ್ಕರ ದಯಮಾಡಿ ಮ್ಯಾಚಿಂಗ್ ಗ್ರಾಂಟ್‌ನ್ನು ಸರ್ಕಾರದಿಂದ ಕೊಡಿಸಿಕೊಡಬೇಕೆಂದು ನಾನು ಪ್ರಾರ್ಥನೆ ಮಾಡಿಕೊಳ್ಳುತ್ತಿದ್ದೇನೆ.

ಶ್ರೀ ಎನ್. ಚಲುವರಾಯಸ್ವಾಮಿ: ಮಾನ್ಯ ಸದಸ್ಯರಾದ ಬಸವರಾಜು ರವರು ನನಗೆ ಬಹಳ ದಿವಸಗಳಿಂದ ಒತ್ತಾಯವನ್ನು ಮಾಡುತ್ತಿದ್ದಾರೆ. ಆಂಬ್ಯುಲೆನ್ಸ್ ಕೊಡುವುದರಲ್ಲಿ ಆ ಎನ್.ಜಿ.ಓ. ಅವರು ಏನು ಸಹಕಾರ ಕೊಡುತ್ತೇವೆಂದು ಹೇಳಿದ್ದಾರೆ. ತಮ್ಮ ಮೂಲಕವೇ ಆ ಕಮಿಟ್‌ಮೆಂಟ್ ಲೆಟರ್‌ನ್ನು ತಂದುಕೊಡಿ, ಅದನ್ನು ಪರಿಶೀಲಿಸಿ ನಾವು ಸೂಕ್ತ ಕ್ರಮ ತೆಗೆದುಕೊಳ್ಳುತ್ತೇವೆ, ಒದಗಿಸಿ ಕೊಡುತ್ತೇವೆ.